


**ಹಲವು ಕುಟುಂಬಗಳಲ್ಲಿ, ಒಂದೇ ಅಪಾರ್ಟ್‌ಮೆಂಟಿನಲ್ಲಿ ಗಂಡ ಹೆಂಡತಿ ಮಕ್ಕಳೊಡನೆ ಒಂದು ಫ್ಲಾಟ್‌ನಲ್ಲಿ, ಅಪ್ಪ ಅಮ್ಮ ಇನ್ನೊಂದು ಫ್ಲಾಟ್‌ನಲ್ಲಿ ಇರುವುದಿದೆ. ಹೀಗೆ ಹೊಸಬಗೆಯ ‘ಕೂಡುಕುಟುಂಬ’ದ ವ್ಯವಸ್ಥೆ ರೂಪುಗೊಂಡಿದೆ. ಒಂದೇ ಮನೆಯಲ್ಲಿ ವಾಸಿಸುವಾಗ ಉದ್ಭವಿಸುವ ದಿನದಿನದ ಪ್ರತಿಕ್ಷಣದ ಕಿರಿಕಿರಿಯನ್ನು ಇದು ತಪ್ಪಿಸುತ್ತದೆ.**

ನೋವುಗಳನ್ನು ಯಾರಲ್ಲಿಯೂ ಹೇಳಿಕೊಳ್ಳದಾದಾಗ, ಮನಸ್ಸು ನಮ್ಮ ಸಣ್ಣ ಸಮಸ್ಯೆಗಳಿಗೂ ದುರ್ಬೀನು ಹಿಡಿದು ಅವನ್ನು ಭೂತಾಕಾರವಾಗಿ ಹಿಗ್ಗಿಸಿ ನಕಾರಾತ್ಮಕವಾಗಿ ಗ್ರಹಿಸುತ್ತದೆ. ಸ್ವಯಂಮರುಕದ ಕೂಪದಲ್ಲಿ ಜಾರಿದ ಮನಸ್ಸು ಖಿನ್ನತೆಯ ಪಾತಾಳವನ್ನು ತಲುಪುತ್ತದೆ; ಅಂತಹ ಸ್ಥಿತಿಯಲ್ಲಿ ಓರ್ವ ವಿದ್ಯಾವಂತ ತಾಯಿ ‘ತಾನು ಸಾಯುವುದೊಂದೇ ಪರಿಹಾರ’ ಎನ್ನುತ್ತಾಳೆ. ವಿದ್ಯಾವಂತ ಮಗಳೂ ಆಕೆಯನ್ನು ‘ಕೊಲ್ಲುವುದೊಂದೇ ಪರಿಹಾರ’ ಎಂದು ನಿರ್ಧರಿಸಿಬಿಡುತ್ತಾಳೆ ಎಂದರೆ ಆಕೆ ಎಂತಹ ಮಾನಸಿಕ ಸ್ಥಿತಿಗೆ ತಲುಪಿರಬೇಕು ಊಹಿಸಿ. ವ್ಯಕ್ತಿ ಸತ್ತರೂ, ಸಮಸ್ಯೆಗಳು ಸಾಯುವುದಿಲ್ಲ. ಈ ಮಹಿಳೆ ಕಂಡುಕೊಂಡ ‘ಪರಿಹಾರ’, ನೆಗಡಿ ಬಂತೆಂದು ಮೂಗು ಕತ್ತರಿಸಿಕೊಂಡಂತಿದೆ!

## ‘ಲೈಫ್ ಈಸ್ ಮ್ಯಾಜಿಕ್’

ಓರ್ವ ಸಕಾರಾತ್ಮಕ ವ್ಯಕ್ತಿಯನ್ನು, ಒಂದು ಪ್ರೇರಣಾದಾಯಕ ಕಥೆಯನ್ನು ಹುಡುಕಿ, ನಾನು ನೂರು ಸಾವಿರ ಮೈಲಿ ದೂರ ಹೋದದ್ದಿದೆ. ಅವರೆಲ್ಲರ ಬದುಕು ‘ಲೈಫ್ ಈಸ್ ನಾಟ್ ಲಾಜಿಕ್, ಇಟ್ ಈಸ್ ಮ್ಯಾಜಿಕ್’ ಎಂದು ತಿಳಿಸಿದೆ. ಕಾರಣ, ಒಂದು ಸಮಸ್ಯೆಗೆ ಒಂದು ಉತ್ತರವಲ್ಲದಿದ್ದರೂ, ಹುಡುಕಿ ಹೋದರೆ ನೂರೊಂದು ಹಾದಿಗಳುಂಟು ಎಂದು ಅವರುಗಳ ಬದುಕು ಮತ್ತೆ ಮತ್ತೆ ದೃಢೀಕರಿಸಿ ಮನವರಿಕೆ ಮಾಡಿದೆ. ಇದು ಜೀವನ ಕೌಶಲದ ಪಾಠ. ಮ್ಯಾನೇಜ್‌ಮೆಂಟ್ ಪರಿಭಾಷೆಯಲ್ಲಿ ‘ಪ್ರಾಬ್ಲಮ್ ಸಾಲ್ವಿಂಗ್ ಸ್ಕಿಲ್’ ಎನ್ನುತ್ತೇವೆ.

ಮೊದಲಿಗೆ ಮೇಲೆ ಉಲ್ಲೇಖಿಸಿದ ಮಹಿಳೆಯ ಸಮಸ್ಯೆಯನ್ನೇ ತೆಗೆದುಕೊಳ್ಳೋಣ. ಪರಿಹಾರದ ಹಲವು ಹಾದಿಗಳಿದ್ದವು. ಇಬ್ಬರು ಹಿರಿಯ ಮಹಿಳೆಯರನ್ನು ಜೊತೆಯಲ್ಲಿ ಇರಿಸಿಕೊಳ್ಳುವುದು ಅಸಾಧ್ಯ ಎಂಬಷ್ಟು ಕಷ್ಟವಿದ್ದಲ್ಲಿ, ಬೆಂಗಳೂರಿನಂತಹ ನಗರದಲ್ಲಿ ಉಚಿತವಾಗಿ ನಡೆಸುತ್ತಿರುವ ವೃದ್ಧಾಶ್ರಮಗಳಿಂದ ಹಿಡಿದು, ಮಧ್ಯಮ ವರ್ಗಕ್ಕೆ ಎಟಕುವಂತಹ ವೃದ್ಧಾಶ್ರಮಗಳು ಇಂದು ಸಾಕಷ್ಟಿವೆ. ನಿವೃತ್ತಳಾದ ಈ ನಾಲ್ಕು ವರ್ಷಗಳಲ್ಲಿ ಅನೇಕ ವೃದ್ಧಾಶ್ರಮಗಳಿಗೆ ಭೇಟಿಕೊಟ್ಟಿದ್ದೇನೆ. ಬದಲಾದ ಸಾಮಾಜಿಕ ಪರಿಸರದಲ್ಲಿ, ಇದು ಕೂಡಾ ಒಂದು ದಾರಿಯಾಗಿದೆ.

ಇದೇ ವರ್ಷ ಮೈಸೂರಿನ ವೃದ್ಧಾಶ್ರಮದಲ್ಲಿ ಆರೋಗ್ಯವಂತರಾಗಿರುವ ಹಿರಿಯ ಸ್ನೇಹಿತರನ್ನು ಭೆಟ್ಟಿಯಾಗಿ ಬಂದೆ. ಅವರ ಮಗ ಮತ್ತು ಮಗಳು ಇಬ್ಬರಿಗೂ ವಿವಾಹವಾಗಿದೆ, ಅವರವರ ಕುಟುಂಬದೊಡನೆ ಅವರು ಮೈಸೂರಿನಲ್ಲಿಯೇ ನೆಲೆಸಿದ್ದಾರೆ. ಯಾವ ಅನಿವಾರ್ಯವೋ, ಈಕೆ ಇಲ್ಲಿದ್ದಾರೆ. ಆದರೆ ಮನಸ್ಸನ್ನು ಕಹಿಯಾಗಿಸಿಕೊಳ್ಳದೆ, ನೋಯದೆ, ನೋಯಿಸದೆ ಸಂತೋಷವಾಗಿ ತಮ್ಮ ಬರಹದ ಹವ್ಯಾಸದಲ್ಲಿ ತೊಡಗಿದ್ದಾರೆ. ಮಕ್ಕಳು, ಮೊಮ್ಮಕ್ಕಳು ಬಂದು ಭೇಟಿಯಾದಾಗ, ಸಮಾರಂಭಕ್ಕೆ ಕರೆದೊಯ್ದಾಗ ಸಂತಸದಿಂದ ಹೋಗಿ ಬರುತ್ತಾರೆ.

ಅನೇಕ ಹಿರಿಯರು ಜೀವನ ಸಂಗಾತಿ ತೀರಿಕೊಂಡು ಒಂಟಿಯಾದಾಗಲೂ, ತಮ್ಮ ಮನೆಯಲ್ಲಿಯೇ ಉಳಿಯಲು ಬಯಸುತ್ತಾರೆ. ಡಾ. ಜ್ಯೋತ್ಸ್ನಾ ಕಾಮತ್, ಮಗ ಕರೆದರೂ ಅಮೆರಿಕಗೆ ಹೋಗದೆ, ತಮ್ಮದೇ ಮನೆಯಲ್ಲಿ ತಮ್ಮ ಸಾವಿರ ಪುಸ್ತಕಗಳ ನಡುವೆ, ಪತಿ ಡಾ. ಕೃಷ್ಣಾನಂದ ಕಾಮತರ ಸವಿನೆನಪುಗಳ ಜೊತೆಯಲ್ಲಿ